## ಮದುವೆಯ ಪರ

ದೇವರು ಕೊಟ್ಟರೆ, ಮಕ್ಕಳು, ಸದಾ ಜೊತೆಗಿರುವ ಸಂಗಾತಿ (ವೃದ್ಧಾಪ್ಯದಲ್ಲಿ ಸ್ನೇಹಿತೆ), ಪ್ರೇಮಿಸಬಹುದಾದ ಮತ್ತು ಜೊತೆ ಆಡಬಲ್ಲ ವಸ್ತು, ಹೇಗಾದರೂ ನಾಯಿಗಿಂತ ಉತ್ತಮ, ಮನೆ, ಮನೆಯನ್ನು ನೋಡಿಕೊಳ್ಳಲು ಒಬ್ಬಳು, ಸಂಗೀತ ಮತ್ತು ಹೆಂಗಸರ ಹರಟೆ, ಇವೆಲ್ಲಾ ಒಬ್ಬನ ಆರೋಗ್ಯಕ್ಕೆ ಒಳ್ಳೆಯವು.

ಆದರೆ ನೆಂಟರು ಮತ್ತು ಇಷ್ಟರು ಬರುತ್ತಾರೆ ಮತ್ತು ಅವರನ್ನು ನೋಡಲು ಹೋಗಬೇಕು, ಸಮಯ ಹಾನಿ... ಅಯ್ಯೋ ದೇವರೇ ನಾನೊಬ್ಬನೇ ಜೀವನವಿಡೀ, ಜೇನಿನಂತೆ, ದುಡಿಯುತ್ತಾ ದುಡಿಯುತ್ತಾ ಇರುವುದೇ? ಇಲ್ಲ, ಇಲ್ಲ ಸಾಧ್ಯವಿಲ್ಲ. ದಿನವೆಲ್ಲಾ ಲಂಡನ್ನಿನ ಹೊಗೆಯಲ್ಲಿ ಒಬ್ಬನೇ ಮನೆಯಲ್ಲಿ ದುಡಿಯುವುದನ್ನು ನೆನಪಿಸಿಕೊ... ಬದಲಾಗಿ ಸೋಫಾ ಮೇಲೆ ಹೆಂಡತಿಯ ಪಕ್ಕ, ಹೀಟರಿನ ಮುಂದೆ, ಸಂಗೀತ ಮತ್ತು ಪುಸ್ತಕಗಳೊಡನೆ ಕುಳಿತಿರುವುದನ್ನು ಊಹಿಸಿಕೋ... ಇದನ್ನು ಅಸಹ್ಯದ ಮಾಲ್ಬರೋ ಬೀದಿಯ ವಾಸ್ತವ್ಯಕ್ಕೆ ಹೋಲಿಸು.

## ಮದುವೆಯ ವಿರುದ್ಧ

ಮಕ್ಕಳಿಲ್ಲ, ಎರಡನೆಯ ಜೀವನವಿಲ್ಲ. ವೃದ್ಧಾಪ್ಯದಲ್ಲಿ ನೋಡಿಕೊಳ್ಳುವವರು ಯಾರೂ ಇಲ್ಲ. ಹತ್ತಿರದ ಮತ್ತು ಪ್ರಿಯರ ಅನುಕಂಪವಿರದೆ ಹೋದರೆ ದುಡಿದು ಏನು ಪ್ರಯೋಜನ? ಮುದುಕರಿಗೆ, ಸಂಬಂಧಿಗಳ ವಿನಃ ಹತ್ತಿರದವರು ಮತ್ತು ಪ್ರಿಯರು ಯಾರು?

ಯಾವಾಗಲಾದರೂ ಎಲ್ಲಿಗಾದರೂ ಹೋಗುವ ಸ್ವಾತಂತ್ರ್ಯ, ಬೇಕಾದ ಕ್ಲಬ್ಬಿನ ಆಯ್ಕೆ ಅಥವಾ ನಿರ್ಲಕ್ಷ್ಯ, ಕ್ಲಬ್ಬುಗಳಲ್ಲಿ ಬುದ್ಧಿವಂತರೊಡನೆ ಮಾತುಕತೆ, ಸಂಬಂಧಿಕರನ್ನು ಹೋಗಿ ನೋಡುವ ಬಲಾತ್ಕಾರವಿಲ್ಲ, ಕೆಲಸಕ್ಕೆ ಬಾರದ ವಿಷಯದಲ್ಲಿ ತಲೆಹಾಕುವಂತಿಲ್ಲ, ಮಕ್ಕಳಿಗಾಗಿ ಖರ್ಚು ಮತ್ತು ಅವರ ಬಗ್ಗೆ ಆತಂಕಕ್ಕೆ ಕಾರಣವಿಲ್ಲ.

ಮಕ್ಕಳ ಜಗಳವಿಲ್ಲ, ಕಾಲಹರಣವಿಲ್ಲ, ಸಂಜೆ ಓದಲಾಗುವುದಿಲ್ಲ, ಬೊಜ್ಜು, ಸೋಮಾರಿತನ, ಆತಂಕ, ಜವಾಬ್ದಾರಿ, ಪುಸ್ತಕಗಳಿಗೆ ಕಡಿಮೆ ಹಣ, ಬಹಳ ಮಕ್ಕಳಾದರೆ ಅವರಿಗಾಗಿ ಹೆಚ್ಚು ದುಡಿಯಬೇಕು, ಆರೋಗ್ಯ ಹಾನಿ. ಪ್ರಾಯಶಃ ನನ್ನ ಹೆಂಡತಿಗೆ ಲಂಡನ್ ಇಷ್ಟವಾಗಲಾರದು. ಆಗ ಗಡೀಪಾರಿನ ಶಿಕ್ಷೆ, ಸೋಮಾರಿ ಪೆದ್ದನಾಗಿ ಕ್ಷೀಣತೆ.

## ತೀರ್ಮಾನ

ಮದುವೆಯಾಗು, ಮದುವೆಯಾಗು, ಮದುವೆಯಾಗು, QED.

ಮದುವೆಯಾಗಬೇಕೆಂದು ನಿರ್ಧರಿಸಿದ್ದಾಯಿತು. ಈಗ ಮತ್ತೊಂದು ಪ್ರಶ್ನೆ ಡಾರ್ವಿನ್ನನ ಮುಂದೆ ಎದ್ದಿತು. ಯಾರನ್ನು ಮದುವೆ ಆಗುವುದು? ಅವರು ಬಯಸುವಂತಹ ಮೃದು ಮತ್ತು ಸೊಗಸಾದ ಹುಡುಗಿ ಎಲ್ಲಿದ್ದಾಳೆ?

ಹುಡುಗಿಯನ್ನು ಹುಡುಕುವ ಪ್ರಮೇಯವೇ ಇರಲಿಲ್ಲ. ಅವರ ಸೋದರ ಸಂಬಂಧಿ ಎಮ್ಮಾ ಅತ್ಯಂತ ಅರ್ಹ ವ್ಯಕ್ತಿಯಾಗಿದ್ದರು. ಅವರಿಗೆ ಚೆನ್ನಾಗಿಯೇ ಪರಿಚಯವಿದ್ದ ಹುಡುಗಿ. ಸುಂದರಿ, ಫ್ರೆಂಚ್, ಇಟಾಲಿಯನ್ ಮತ್ತು ಜರ್ಮನ್ ಭಾಷೆಗಳನ್ನು ಬಲ್ಲಾಕೆ. ಅಲ್ಲದೆ ವಿಶ್ವವಿಖ್ಯಾತ ಶೊಪಾನನಿಂದ ಪಿಯಾನೊ ನುಡಿಸುವುದನ್ನೂ ಕಲಿತಿದ್ದರವರು.

ಈ ವೇಳೆಗಾಗಲೇ ಎಮ್ಮಾ ಕೆಲವು ಹುಡುಗರನ್ನು ತಿರಸ್ಕರಿಸಿದ್ದರು. ತನಗೂ ಅದೇ ಗತಿಯಾಗಬಹುದೆಂದು ಡಾರ್ವಿನ್ನರಿಗೆ ಅನುಮಾನ. ಪ್ರತಿ ಭಾನುವಾರ ಅವರು ಶಾಲೆಯೊಂದರಲ್ಲಿ ಬೋಧಿಸುತ್ತಿದ್ದರು. ಅಂದು ಪಾಠ ಮುಗಿಸಿ ಹೊರಬಂದಾಗ ಡಾರ್ವಿನ್ ಮದುವೆಯ ಪ್ರಸ್ತಾಪ ಮಾಡಿದರು. ಎಮ್ಮಾ ಒಮ್ಮೆಗೇ ಒಪ್ಪಿಕೊಂಡರು. ಇದನ್ನು ಕಂಡು ಆಶ್ಚರ್ಯವಾದದ್ದು ಡಾರ್ವಿನ್ ಒಬ್ಬರಿಗೆ ಮಾತ್ರ. ಇಬ್ಬರ ಸಂಬಂಧಿಗಳೆಲ್ಲಾ ಇದನ್ನು ನಿರೀಕ್ಷಿಸಿದ್ದರು. ಎಮ್ಮಾ ಅವರು, ಡಾರ್ವಿನ್ನನ ಬಗ್ಗೆ ಇದ್ದ ಎಲ್ಲಿಲ್ಲದ ಅಭಿಮಾನವನ್ನು ಮಿಕ್ಕವರಿಗೆ ಬರೆದ ಪತ್ರಗಳಲ್ಲಿ ಹೇಳಿಕೊಂಡರು.

ಎಮ್ಮಾ ಜೀವನದುದ್ದಕ್ಕೂ ಡಾರ್ವಿನ್‌ಗೆ ಅನುಕೂಲೆಯಾಗಿದ್ದರು. ಇಬ್ಬರ ನಡುವೆ ಸಾಕಷ್ಟು ಅಭಿಪ್ರಾಯಭೇದಗಳಿದ್ದವು. ಚರ್ಚಿನ ನಂಬಿಕೆಗೆ ವಿರುದ್ಧವಾಗಿದ್ದ ತನ್ನ ವಿಕಾಸವಾದದ ಬಗ್ಗೆ ಎಮ್ಮಾಗೆ ಮದುವೆಯ ಮುಂಚೆ ಹೇಳಬೇಡ ಎಂದು ಅವರ ತಂದೆ ಬುದ್ಧಿ ಹೇಳಿದ್ದರು. ಆದರೆ ಡಾರ್ವಿನ್ ತಂದೆಯ ಮಾತನ್ನು ಮೀರಿದ್ದರು. ಎಮ್ಮಾ ಭಾವೀ ಗಂಡನ ನಿಲುವನ್ನು ಅರ್ಥಮಾಡಿಕೊಂಡರು.

1839ರಲ್ಲಿ 29 ವರ್ಷದ ಡಾರ್ವಿನ್ 31 ವರ್ಷದ ಎಮ್ಮಾ ಅವರನ್ನು ಮದುವೆಯಾದರು. ಅವರು ಸಂಸಾರ ಹೂಡಲು ಸಹಾಯಕವಾಗಿ ಡಾರ್ವಿನ್ನರ ತಂದೆ 10000 ಪೌಂಡ್ ನೀಡಿದರೆ, ಮಾವನ ಮನೆಯಿಂದ 5000 ಪೌಂಡ್ ಬಂದವು. ಇದಲ್ಲದೆ ತಂದೆ ಅವರಿಗೆ ವರ್ಷಕ್ಕೆ 400 ಪೌಂಡ್ ನೀಡುವುದಾಗಿ ಆಶ್ವಾಸನೆ ಇತ್ತರು.


ಡಾರ್ವಿನ್‌ನ ನೆನಪುಗಳ ಡೌನ್ ಹೌಸ್